ಓ.ಎಸ್. ನಂ. 17/2023 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 27.2.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ಶ್ರೀ ಹೆಚ್.ಎಂ.ಎಂ.ಜಿ ವಕೀಲರಿಂದಃ**

1 ನೇ ಪ್ರತಿವಾದಿಯು ವಾಸವಾಗಿರುವ ಮನೆಯು ನನ್ನ ತಂದೆಗೆ ಸೇರಿದ ಮನೆ ಎಂದರೆ ಸರಿಯಲ್ಲ. ದಾವಆಸ್ತಿಯು ಜಂಟಿ ಸ್ವಾಧೀನದಲ್ಲಿರುತ್ತದೆ ಎಂದು ತೋರಿಸಲು ನಾನು ಯಾವುದೇ ಕಂದಾಯವನ್ನು ಕಟ್ಟಿರುವುದಿಲ್ಲ. ಆಲನಹಳ್ಳಿ ಗ್ರಾಮದಲ್ಲಿ ನನ್ನ ತಂದೆಗೆ ಸೇರಿದ 12 ಕಂಬದ ತೊಟ್ಟಿ ಮನೆ ಇತ್ತು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆಗೆ ಗಂಗಡಹಳ್ಳಿ ಗ್ರಾಮದಲ್ಲಿ 20 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ 12 ಕಂಬದ ತೊಟ್ಟಿ ಮನೆ ಪೈಕಿ 6 ಕಂಬದ ತೊಟ್ಟಿ ಮನೆ ಹಾಗೂ ಗಂಗಡಹಳ್ಳಿ ಗ್ರಾಮದ 20 ಗುಂಟೆ ಜಮೀನು ಪೈಕಿ 10 ಗುಂಟೆ ಜಮೀನು 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿ, 6 ಮತ್ತು 7 ನೇ ಪ್ರತಿವಾದಿಯರು ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಜಮೀನು ಖರೀದಿಸಿ ಮನೆ ಕಟ್ಟಿಕೊಂಡಿರುತ್ತಾರೆ ಎನ್ನುವರು. ಅವರು ಹಲವಾರು ವರ್ಷಗಳಿಂದ ಬೇರೆ ಬೇರೆಯಾಗಿ ವಾಸವಾಗಿದ್ದು ಅವರವರ ಪಾಲಿಗೆ ಬಂದ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ತುಂಬಾ ಹಿಂದೆ 1 ನೇ ಪ್ರತಿವಾದಿ ಹಾಗೂ ಕುಮಾರ್ ರವರ ಹೆಸರಿಗೆ ದಾವಆಸ್ತಿಯ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆಯ ಜಮೀನಿನಲ್ಲಿ ನನಗೆ ಪಾಲು ಇರುತ್ತದೆ, ಅವರ ಹೆಸರಿಗೆ ಖಾತೆಯಾಗಿರಲಿ ಎನ್ನುವರು. ಓ.ಎಸ್ 396/2022 ರಲ್ಲಿ ನಿಮ್ಮನ್ನು ಪಕ್ಷಗಾರರಾಗಿ ಮಾಡಿ ಎಂದು ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿದಾರರು ದಾವೆ ಸಲ್ಲಿಸಿರುವ ವಿಚಾರ ಗೊತ್ತಿರುವುದಿಲ್ಲ ಎನ್ನುವರು. ನಿಪಿ4 ರಿಂದ ನಿಪಿ7 ಪಹಣಿಗಳನ್ನು ಯಾರು ಅರ್ಜಿ ಸಲ್ಲಿಸಿ ಪಡೆದುಕೊಂಡಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಅವಿದ್ಯಾವಂತಳಾಗಿರುವ ಕಾರಣ ನನ್ನ ವಕೀಲರು ಪಡೆದುಕೊಂಡಿರುತ್ತಾರೆ ಎನ್ನುವರು. ನಿಪಿ4 ರಿಂದ 7 ದಾಖಲೆಗಳನ್ನು 5 ನೇ ಪ್ರತಿವಾದಿ ನನಗೆ ತೆಗೆದು ನೀಡಿದ್ದು ಈ ದಾವೆಗೆ ಅವರೆ ಕಾರಣ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಓ.ಎಸ್ 66/2018 ರಂತೆ ಆಗಿರುವ ಡಿಕ್ರಿಯ ಪ್ರಕಾರ ಇದೇ ನ್ಯಾಯಾಲಯದಲ್ಲಿ ಜಾರಿ ಸಂಖ್ಯೆ 4/2023 ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಸಲ್ಲಿಸಿದ ನಂತರ ಉಳಿದ ಪ್ರತಿವಾದಿಯರ ಜೊತೆ ಶಾಮೀಲಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯ ಪೈಕಿ 2 ಎಕರೆ ಜಮೀನನ್ನು 9 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ 1 ರಿಂದ 5 ನೇ ಪ್ರತಿವಾದಿ ಹಾಗೂ ವಾದಿಯರು ಸೇರಿ ಈ ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರು 2007 ರಲ್ಲಿ ದಾವಆಸ್ತಿಯ ಪೈಕಿ 2 ಎಕರೆ ಜಮೀನನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದನ್ನು ನೀವು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ

ಎನ್ನುವರು. ನನಗೆ ದಾವಆಸ್ತಿಯ ಸರ್ವೆ ನಂಬರ್ ಗೊತ್ತಿರುವುದಿಲ್ಲ. ದಾವಆಸ್ತಿಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಚನ್ನಮಲ್ಲಪ್ಪನವರ ಜಮೀನು, ಉತ್ತರಕ್ಕೆ ಕೆಂಡಗಣ್ಣಪ್ಪನವರ ಜಮೀನು, ದಕ್ಷಿಣಕ್ಕೆ ರಂಗನಾಯಕನ ಜಮೀನು ಇರುತ್ತದೆ. 9 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕರಾರುಪತ್ರದ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. 9 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯಪತ್ರದ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಾನು ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರ ಚಿತಾವಣೆ ಮೇರೆಗೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರು ಈ ದಾವೆಗೆ ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. 9 ನೇ ಪ್ರತಿವಾದಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.